ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

DTE-ADMI0ACM2/20/2023

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ:18-05-2023.

-:: ಸುತ್ತೋಲೆ ::-

**ವಿಷಯ:** 2023-24ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿನ ಅನುದಾನಿತ ಕೋರ್ಸುಗಳಿಗೆ ಪ್ರಥಮ ಸೆಮಿಸ್ಟರ್ ಇಂಜಿನಿಯರಿಂಗ್ ಹಾಗೂ ನಾನ್-ಇಂಜಿನಿಯರಿಂಗ್ ಡಿಪ್ಲೋಮಾ ಕೋರ್ಸುಗಳ ಪ್ರವೇಶಾತಿ ಸಂಬಂಧ ಅವಧಿಯನ್ನು ವಿಸ್ತರಿಸುವ ಬಗ್ಗೆ.

**ಉಲ್ಲೇಖ:** ಈ ಕಛೇರಿ ಪ್ರವೇಶಾಧಿಸೂಚನೆ ಸಂ. DTE-ADMI0ACM2/17/2022, ದಿ:08-05-2023

*********

2023-24ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿನ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಕೋರ್ಸುಗಳ ಎರಡು ವಿಧಾನಗಳ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಿ ದಿ:31-05-2023ರ ಒಳಗೆ ಪೂರ್ಣಗೊಳಿಸಲು ಉಲ್ಲೇಖಿತ ಅಧಿಸೂಚನೆಯಲ್ಲಿ ನಿಗಧಿಪಡಿಸಲಾಗಿತ್ತು. ಸಂಸ್ಥೆಗಳ ಪ್ರಾಂಶುಪಾಲರು ಪ್ರವೇಶ ಅವಧಿ ವಿಸ್ತರಿಸಲು ಕೋರಿರುವುದನ್ನು ಪರಿಗಣಿಸಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮೆರಿಟ್ ಆಧಾರಿತ ಆನ್‌ಲೈನ್ ಪ್ರವೇಶಾತಿ ಮತ್ತು ಮೊದಲು ಬಂದವರಿಗೆ ಮೊದಲ ಆಧ್ಯತೆ ಪ್ರವೇಶಾತಿ ಪ್ರಕ್ರಿಯೆಯ ವಿಧಾನಗಳಲ್ಲಿನ ಕಾಲೇಜುವಾರು ಮತ್ತು ಕೋರ್ಸುಗಳಿಗೆ ಪ್ರವೇಶ ಬಯಸುವ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸಲು ಮತ್ತು ಸೀಟು ಹಂಚಿಕೆ ಮಾಡಲು ಕೆಳಕಂಡಂತೆ ಅವಧಿಯನ್ನು ವಿಸ್ತರಿಸಲಾಗಿದೆ.

**ಮೆರಿಟ್ ಆಧಾರಿತ ಆನ್‌ಲೈನ್ ಪ್ರವೇಶಾತಿ ಪ್ರಕ್ರಿಯೆಯ ವಿವಿಧ ಹಂತಗಳ ಪರಿಷ್ಕೃತ ವೇಳಾಪಟ್ಟಿಯು ಈ ಕೆಳಕಂಡಂತಿದೆ.**

| | | | |
|---|---|---|---|
| 01. | ಇಲಾಖೆಯ ಅಧೀಕೃತ ವೆಬ್‌ಸೈಟ್‌ಗಳಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿ ಮತ್ತು ಆದ್ಯತಾ ಪಟ್ಟಿಯನ್ನು ಸಮೀಪದ ಯಾವುದೇ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರಿಗೆ ಸಲ್ಲಿಸಲು ಕೊನೆಯ ದಿನಾಂಕ: | : | 22-05-2023ರ ಸಂಜೆ 5.30 ರವರೆಗೆ |
| 02. | ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಮೆರಿಟ್ ಪಟ್ಟಿ ಪ್ರಕಟಣೆ ಯನ್ನು ಅಧೀಕೃತ ವೆಬ್‌ಸೈಟ್‌ಗಳ ಮೂಲಕ ಪ್ರಕಟಿಸುವ ದಿನಾಂಕ: (ಅಭ್ಯರ್ಥಿಗಳ ಮೊಬೈಲ್ ಸಂಖ್ಯೆಗೆ ಎಸ್.ಎಂ.ಎಸ್ ಮೂಲಕ ಮಾಹಿತಿಯನ್ನು ರವಾನಿಸಲಾಗುವುದು). | : | 22-05-2023 ಸಂಜೆ 6.00ರ ನಂತರ |
| 03. | ಮೆರಿಟ್ ಪಟ್ಟಿ ಆಕ್ಷೇಪಣೆಗೆ/ಪರಿಷ್ಕರಣೆ/ತಿದ್ದುಪಡಿ ಮಾಡಲು ಇಚ್ಛೆಸಿದಲ್ಲಿ ಅಭ್ಯರ್ಥಿಗಳು ಸಮೀಪದ ಯಾವುದೇ ಸರ್ಕಾರಿ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರಿಗೆ ಮನವಿ ಸಲ್ಲಿಸಲು ಅಂತಿಮ ದಿನಾಂಕ : | : | 23-05-2023 ಬೆಳಿಗ್ಗೆ 10.00 ರಿಂದ ಸಂಜೆ 5.00ರ ವರೆಗೆ |

| | | | |
|---|---|---|---|
| 04. | ಅಂತಿಮ ಮೆರಿಟ್ ಪಟ್ಟಿ ಪ್ರಕಟಣೆಯ ದಿನಾಂಕ: | : | 23-05-2023<br>ಸಂಜೆ 6.00 ರ ನಂತರ |
| 05. | ಸೀಟು ಹಂಚಿಕೆ ಪ್ರಕಟಣೆಯ ದಿನಾಂಕ: | : | 24-05-2023<br>ಸಂಜೆ 6.00 ರ ನಂತರ |
| 06. | ಸೀಟು ಹಂಚಿಕೆಯಾದ ಅಭ್ಯರ್ಥಿಗಳು ನಿಗಧಿತ ಶುಲ್ಕದೊಂದಿಗೆ ಸಂಬಂಧಪಟ್ಟ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಪ್ರಾರಂಭ ಮತ್ತು ಕೊನೆಯ ದಿನಾಂಕ: | : | 25-05-2023<br>ರಿಂದ<br>27-05-2023 ರವರೆಗೆ |
| 07. | ಸೀಟು ಹಂಚಿಕೆಯಾದ ನಂತರ ಭರ್ತಿಯಾಗದ ಉಳಿಕೆ ಸೀಟುಗಳನ್ನು ಮೊದಲು ಬಂದವರಿಗೆ ಮೊದಲ ಆದ್ಯತೆಯ ಮೇಲೆ ಪ್ರಾಂಶುಪಾಲರ ಹಂತದಲ್ಲಿಯೇ ಆಫ್‌ಲೈನ್ ಮೂಲಕ ಸೀಟು ಹಂಚಿಕೆ ಮಾಡಲು ಪ್ರಾರಂಭ & ಅಂತಿಮ ದಿನಾಂಕ: | : | 29-05-2023<br>ರಿಂದ<br>03-06-2023ರವರೆಗೆ |

ವಿಶೇಷ ಗುಂಪಿನಡಿ ಬರುವ ಸ್ಪೋರ್ಟ್, ಎನ್.ಸಿ.ಸಿ ಮತ್ತು ಸ್ಕೌಟ್ಸ್&ಗೈಡ್ಸ್, ಸೈನಿಕ & ಮಾಜಿ-ಸೈನಿಕ, ಬಾಲಾಪಾರಾಧಿ ಕೋಟಾ, ಹೊರನಾಡು ಕನ್ನಡಿಗ / ಹೊರನಾಡು ಕನ್ನಡಿಗ ಕೋಟಾದ, ಐ.ಟಿ.ಐ, ಜೆ.ಓ.ಸಿ, ಜೆ.ಎಲ್.ಸಿ ಕೋಟಾದ ಮತ್ತು ವಿಶೇಷಚೇತನರ ಕೋಟಾ ಪ್ರವರ್ಗಗಳಿಗೆ ಸ್ಥಾನಗಳನ್ನು ಮೀಸಲಿಸಿರುವ ಸಂಸ್ಥೆಗಳ ಪ್ರಾಂಶುಪಾಲರುಗಳು ಇಲಾಖೆಯ ತಂತ್ರಾಂಶದಲ್ಲಿ **ದಿ:22-05-2023 ರಿಂದ 23-05-2023ರ ಮಧ್ಯಾಹ್ನ 12.00** ರ ಒಳಗೆ ವಿವರಗಳನ್ನು ಕಡ್ಡಾಯವಾಗಿ ತಪ್ಪದೇ ನಮೂದಿಸುವುದು. ಈ ರೀತಿ ನಮೂದಿಸಿದ ವಿದ್ಯಾರ್ಥಿಗಳಿಗೆ ಎಲ್ಲಾ ವರ್ಗದ ವಿದ್ಯಾರ್ಥಿಗಳ ಜೊತೆಗೆ ಸೀಟು ಹಂಚಿಕೆ ಮಾಡಲಾಗುವುದು.

**ಮೊದಲು ಬಂದವರಿಗೆ ಮೊದಲ ಆದ್ಯತೆ ಪ್ರವೇಶಾತಿ ಪ್ರಕ್ರಿಯೆಯ ಪ್ರವೇಶ ಅವಧಿಯು ಈ ಕೆಳಕಂಡಂತಿದೆ:**

| | |
|---|---|
| ಇಲಾಖೆಯ ಅಧೀಕೃತ ವೆಬ್‌ಸೈಟ್‌ಗಳಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು, ಭರ್ತಿ ಮಾಡಿದ ಅರ್ಜಿಯನ್ನು ಪ್ರವೇಶ ಬಯಸುವ ಸಂಸ್ಥೆಯ ಪ್ರಾಂಶುಪಾಲರಿಗೆ ಸಲ್ಲಿಸಿ ತಕ್ಷಣವೇ ಪ್ರವೇಶ ಪಡೆಯಲು ಕೊನೆಯ ದಿನಾಂಕ:<br>**ವಿ.ಸೂ:- ಅರ್ಜಿ ಸ್ವೀಕೃತಿಗೆ ನಿಗಧಿಪಡಿಸಿರುವ ಕೊನೆಯ ದಿನಾಂಕಕ್ಕೂ ಮೊದಲೇ ಎಲ್ಲಾ ಸೀಟುಗಳು ಭರ್ತಿಯಾದಲ್ಲಿ ಆ ನಂತರ ಯಾವುದೇ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.** | **03-06-2023ರ ಸಂಜೆ 5.30 ರವರೆಗೆ** |

ಮೇಲ್ಕಂಡಂತೆ ಆಯಾ ಪಾಲಿಟೆಕ್ನಿಕ್‌ನ ಪ್ರಿನ್ಸಿಪಾಲರು ಗಮನದಲ್ಲಿರಿಸಿಕೊಂಡು ನಿಯಮಗಳ ಪ್ರಕಾರ ಪ್ರವೇಶವನ್ನು ಪೂರೈಸುವಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ. ಮೇಲೆ ನಮೂದಿಸಿರುವಂತೆ ಕೂಡಲೇ ಕ್ರಮ ತೆಗೆದುಕೊಂಡು ಈ ಬಗ್ಗೆ ಸ್ಥಳೀಯವಾಗಿ ಪತ್ರಿಕಾ ಪ್ರಕಟಣೆಯನ್ನು ನೀಡಿ, ಅಭ್ಯರ್ಥಿಗಳ ಮತ್ತು ಪಾಲಕರ ಗಮನಕ್ಕೆ ತರುವುದು. ಉಳಿದಂತೆ ಉಲ್ಲೇಖಿತ ಪ್ರವೇಶಾಧಿಸೂಚನೆಯಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

***"ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"***

K.G. 18/05/23

**ನಿರ್ದೇಶಕರು**

**ತಾಂತ್ರಿಕ ಶಿಕ್ಷಣ ಇಲಾಖೆ**

**ಬೆಂಗಳೂರು**

**ಗೆ, ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ** - ಮಾಹಿತಿಗಾಗಿ & ಮುಂದಿನ ಅಗತ್ಯ ಕ್ರಮಕ್ಕಾಗಿ ಹಾಗೂ ಸಂಸ್ಥೆಯ ಸೂಚನಾ ಫಲಕದಲ್ಲಿ ಪ್ರಕಟಿಸುವುದು ಮತ್ತು ಮೇಲೆ ನಮೂದಿಸಿರುವಂತೆ ಕೂಡಲೇ ಕ್ರಮ ತೆಗೆದುಕೊಂಡು ಈ ಬಗ್ಗೆ ಸ್ಥಳೀಯವಾಗಿ ಪತ್ರಿಕಾ ಪ್ರಕಟಣೆಯನ್ನು ನೀಡಿ, ಅಭ್ಯರ್ಥಿಗಳ ಮತ್ತು ಪೋಷಕರ ಗಮನಕ್ಕೆ ತರುವುದು.

ಪ್ರತಿ ಮಾಹಿತಿಗಾಗಿ:-

1) ಮಾನ್ಯ ಆಯುಕ್ತರ ಆಪ್ತಶಾಖೆಗೆ.

2) ಮಾನ್ಯ ನಿರ್ದೇಶಕರ ಆಪ್ತಶಾಖೆಗೆ.

3) ಇಲಾಖೆಯ ಎಲ್ಲಾ ಜಂಟಿ ನಿರ್ದೇಶಕರುಗಳಿಗೆ.

4) ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ,

5) ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು,

6) ಎಸ್‌ಟಿಎಲ್, ಡಿವಿಪಿ(1) ಮತ್ತು ಡಿವಿಪಿ(2) ವಿಭಾಗಕ್ಕೆ.

7) ಇ.ಆರ್.ಎಸ್ ವಿಭಾಗಕ್ಕೆ - ಸಿ.ಬಿ.ಎಸ್.ಇ, ಐ.ಸಿ.ಎಸ್.ಇ ಹಾಗೂ ಕರ್ನಾಟಕೇತರ ಅಭ್ಯರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರ ವಿತರಿಸುವ ಬಗ್ಗೆ ಇ-ಮಾಹಿತಿ ಪುಸ್ತಕದಲ್ಲಿ ತಿಳಿಸಿರುವಂತೆ ಕ್ರಮಜರುಗಿಸತಕ್ಕದ್ದು.

8) ಇ-ಆಡಳಿತ ವಿಭಾಗಕ್ಕೆ - ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.

9) ಕಡತಕ್ಕೆ.